# ಅಂಗಗಳ ಕಸಿಯನ್ನು ಶಾಸ್ತ್ರೀಯವಾಗಿ ಹೇಗೆ ಒಪ್ಪಲು ಸಾಧ್ಯ?[1]

ಶ್ರೀಯುತ ಎಸ್ ಬದರೀನಾಥ್ ಅವರು ಒಂದು ಮಹತ್ತ್ವದ ಪ್ರಶ್ನೆಯನ್ನು ಕೇಳಿದ್ದಾರೆ –

ಆಚಾರ್ಯರೇ, ಶ್ರೀಮನ್ ಮಧ್ವಾಚಾರ್ಯರ ಶಾಸ್ತ್ರ ಅದ್ಭುತವಾದದ್ದು. ಅದು ಎಲ್ಲ ಕಾಲಕ್ಕೂ ಪ್ರಸ್ತುತ ಮತ್ತು ಅದು ನವೀನ. ವಿಜ್ಞಾನ ಮತ್ತು ನಾಸ್ತಿಕವಾದಗಳನ್ನೂ ಹಿಡಿದು ಇತರ ಎಲ್ಲ ಶಾಸ್ತ್ರಗಳನ್ನೂ ಮೀರಿದ ಶಾಸ್ತ್ರ ಎನ್ನುವ ಬಲವಾದ ನಿಷ್ಠೆ, ವಿಶ್ವಾಸ ನನ್ನದು. ನಿಮ್ಮ ವಿಷಯ ಮಂಡನೆ, ತತ್ವಗಳನ್ನು ತಿಳಿಸುವ ಕ್ರಮ ಮುಂತಾದವುಗಳನ್ನು ನೋಡಿದ ಮೇಲೆ ನನ್ನಲ್ಲಿ ಹಲವು ದಿನಗಳಿಂದ ಉಳಿದ ಕೆಲವು ಸಂದೇಹಗಳನ್ನು ಪರಿಹರಿಸಿಕೊಳ್ಳಬೇಕೆಂದು ನಿಮ್ಮಲ್ಲಿ ಪ್ರಶ್ನೆಗಳನ್ನು ಕೇಳುತ್ತಿದ್ದೇನೆ.

ಇತಿಹಾಸ ಪುರಾಣಗಳಲ್ಲಿ ಬಂದ ಪ್ರಾಣದೇವರ ಮಹತ್ತ್ವ ತಿಳಿಸುವ ಪ್ರಸಿದ್ಧ ಕಥೆ ಇದು. ಎಲ್ಲ

---

[1] ಈ ಪ್ರಶ್ನೋತ್ತರದ ಆಡಿಯೋ ಸಹಿತ ಉಪಲಬ್ಧವಿದೆ. VNU184.

ಇಂದ್ರಿಯಾಭಿಮಾನಿ ದೇವತೆಗಳೂ ಒಬ್ಬರೊಬ್ಬಾಗಿ ದೇಹದಿಂದ ಹೊರ ಹೋದರೂ ದೇಹ ಬೀಳಲಿಲ್ಲ. ಪ್ರಾಣತತ್ವ ಹೊರಬಂದೊಡನೆ ಹೇದ ಪತಿತವಾಯಿತು. ಹಾಗೆ ಎಲ್ಲ ಇಂದ್ರಿಯಾಭಿಮಾನಿ ದೇವತೆಗಳೂ ಒಬ್ಬರೊಬ್ಬಾಗಿ ಪ್ರವೇಶಿಸಿದರೂ ದೇಹ ಸಕ್ರಿಯವಾಗಲಿಲ್ಲ, ಪ್ರಾಣತತ್ವ ಪ್ರವೇಶಿಸಿದ ಕೂಡಲೇ ದೇಹ ಸಕ್ರಿಯವಾಯಿತು ಎಂಬ ಕಥೆ.

ಇದರಿಂದ ನನಗೆ ತಿಳಿದ ಅಂಶವೆಂದರೆ ಜೀವೋತ್ತಮವಾದ ಪ್ರಾಣತತ್ವ ದೇಹದಲ್ಲಿ ಇಲ್ಲವಾದರೆ ಎಲ್ಲ ಇಂದ್ರಿಯಗಳೂ ನಿಷ್ಕ್ರಿಯವಾಗುತ್ತವೆ ಎಂದು.

ಇಂದಿನ ನವೀನ ವಿಜ್ಞಾನದಲ್ಲಿ ಜೀವ ಹೋದ ನಂತರ ದೇಹದಿಂದ ಕಣ್ಣು ಹೃದಯ ಮುಂತಾದ ಅಂಗಗಳನ್ನು ಬೇರ್ಪಡಿಸಿ ಸಂರಕ್ಷಿಸಿ ಮತ್ತೊಬ್ಬರಿಗೆ ಕಸಿ ಮಾಡುತ್ತಾರೆ. ಜೀವೋತ್ತಮವಾದ ಪ್ರಾಣತತ್ವ ಹೊರಹೋದ ಮೇಲೂ ಆಯಾ ಇಂದ್ರಿಯಗಳಲ್ಲಿ ಸತ್ವ ಉಳಿಯುವದಾದರೂ ಹೇಗೆ, ಪ್ರಾಣತತ್ವ ಇಲ್ಲದೆ, ದೇಹಾಧಿಷ್ಠಾನ ಇಲ್ಲದೇ ಇಂದ್ರಿಯಗಳಲ್ಲಿ ಸತ್ವ ಉಳಿಯುವ ಬಗೆ ಹೇಗೆ. ಜೀವ ಹೋದ ಮೇಲೆ ಇಂದ್ರಿಯಗಳು ಜಡ ಎನ್ನುವದಾದರೆ ಮತ್ತೊಂದು ದೇಹಕ್ಕೆ ಅವನ್ನು ಕಸಿ ಮಾಡಿದಾಗ ಮತ್ತೆ ಸಕ್ರಿಯವಾಗುವದಕ್ಕೆ ಏನು ಕಾರಣ?

## ಉತ್ತರ

ದೇವರ ಅಸ್ತಿತ್ವದ ಉಪನ್ಯಾಸ ಮತ್ತು ಪುಸ್ತಕದಲ್ಲಿ ಇದರ ಕುರಿತು ತಿಳಿಸಿದ್ದೇನೆ, ಇಲ್ಲಿ ಮತ್ತೊಮ್ಮೆ ವಿಸ್ತಾರವಾಗಿ ತಿಳಿಸುತ್ತೇನೆ.

ನೋಡಿ, ನಾವು ಕಣ್ಣು, ಕಿವಿ, ನಾಲಿಗೆ, ಮುಂತಾದವುಗಳನ್ನು ಇಂದ್ರಿಯ ಎಂದು ಕರೆಯುತ್ತೇವೆ. ಅವು ಒಂದೇ ಪದಾರ್ಥವಲ್ಲ, "ತೈಜಸ ಇಂದ್ರಿಯ" ಮತ್ತು "ಗೋಳಕ" ಎಂಬ ಎರಡು ಪದಾರ್ಥಗಳ ಮಿಶ್ರಣ. "ತೈಜಸ ಇಂದ್ರಿಯ" ಎಂಬ ಶಬ್ದದ ಅರ್ಥವ್ಯಾಪ್ತಿ ತುಂಬ ದೊಡ್ಡದು. ಶ್ರೀಮದಾಚಾರ್ಯರು ಆ ಕುರಿತು ನಾಲ್ಕು ಮಹತ್ತ್ವದ ವಿಷಯಗಳನ್ನು ತಿಳಿಸಿದ್ದಾರೆ. (ಸೃಷ್ಟಿಪ್ರಕರಣದ ಉಪನ್ಯಾಸ ಲೇಖನಗಳಲ್ಲಿ ಅದರ ವಿವರಣೆಗಳನ್ನು ನೀಡುತ್ತೇನೆ) ಪ್ರಸಕ್ತ ಸಂದರ್ಭದಲ್ಲಿ ಅಷ್ಟೆಲ್ಲ ವಿವರಣೆಯ ಆವಶ್ಯಕತೆಯಿಲ್ಲ. ಸುಲಭವಾಗಿ ತತ್ವಗಳನ್ನು ತಿಳಿಯಲು ಪ್ರಯತ್ನಿಸೋಣ.

ಕಣ್ಣು ಎಂಬ ಇಂದ್ರಿಯವನ್ನೇ ಉದಾಹರಣೆಯನ್ನಾಗಿಟ್ಟುಕೊಂಡು ಉತ್ತರಿಸಲು ಪ್ರಯತ್ನಿಸುತ್ತೇನೆ.

**ಕಣ್ಣಿನಲ್ಲಿ "ನೋಡುವ ಶಕ್ತಿ" ಮತ್ತು "ಕಣ್ಣು " ಎಂಬ ಭೌತಿಕವಾದ ಎರಡು ಅಂಶಗಳಿವೆ.**

**ಆ ನೋಡುವ ಶಕ್ತಿಯನ್ನೇ ಇಂದ್ರಿಯ, ತೈಜಸ ಇಂದ್ರಿಯ, ಚಕ್ಷುರಿಂದ್ರಿಯ ಎಂದು ಕರೆಯುವದು.**

**ಕಣ್ಣಿನ ಗುಡ್ಡೆ ಮುಂತಾದವು ಗೋಳಕಗಳು. ಯಾವುದೇ ಒಂದು ಭೌತಿಕಶಕ್ತಿ ಕೆಲಸ ಮಾಡಲು ಅದಕ್ಕೆ ಅಧಿಷ್ಠಾನ ಬೇಕೇಬೇಕು. ಆ ಅಧಿಷ್ಠಾನವನ್ನೇ ಗೋಳಕ ಎಂದು ಕರೆಯುವದು.**

ಈ ವಿಷಯ ಸುಲಭವಾಗಿ ಅರ್ಥವಾಗಬೇಕಾದರೆ ನಮ್ಮ ದೇಹದ ದೃಷ್ಟಾಂತವನ್ನೇ ತೆಗೆದುಕೊಳ್ಳೋಣ. "ನಾನು ಬೆಳಿಗ್ಗೆ ಬಂದೆ" ಎನ್ನುತ್ತೇವೆ. ಇಲ್ಲಿ "ನಾನು" ಎಂದರೆ ಜೀವ ಮತ್ತು ಆ ಜೀವಕ್ಕೆ ಅಧಿಷ್ಠಾನವಾದ ದೇಹ. ಜೀವ ಎನ್ನುವದು ಒಂದು ಚೈತನ್ಯ ಅಥವಾ ಶಕ್ತಿ. ಆ ಶಕ್ತಿ ಕ್ರಿಯಾಶೀಲವಾಗಬೇಕಾದರೆ ದೇಹವಿರಬೇಕು. ವಿದ್ಯುತ್ತೆಂಬ ಶಕ್ತಿಗೆ ಕಾರ್ಯ

ಮಾಡಲು ಫ್ಯಾನು, ಬಲ್ಬು ಮುಂತಾದ ಉಪಕರಣಗಳ ಆವಶ್ಯಕತೆಯಿದ್ದ ಹಾಗೆ.

ಅದೇ ರೀತಿ, ಚಕ್ಷುರಿಂದ್ರಿಯ ಎನ್ನುವದು ಒಂದು ಶಕ್ತಿ. ಆ ಇಂದ್ರಿಯ ಕಾರ್ಯವನ್ನು ನಿರ್ವಹಿಸಬೇಕಾದರೆ ಕಣ್ಣುಗುಡ್ಡೆ, ಕಣ್ಣು, ರೆಪ್ಪೆ ಮುಂತಾದವು ಬೇಕು. ಅದೇ ಗೋಳಕ.

ಈಗ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳೋಣ.

ಮುಖ್ಯಪ್ರಾಣದೇವರು ದೇಹ ಬಿಟ್ಟ ಬಳಿಕ ದೇಹದಲ್ಲಿ ಯಾವ ಇಂದ್ರಿಯಗಳ ಕಾರ್ಯವೂ ನಡೆಯುವದಿಲ್ಲ ಎಂದು ಶಾಸ್ತ್ರ ತಿಳಿಸುತ್ತದೆ, ಆದರೆ, ದೇಹದಲ್ಲಿ ಪ್ರಾಣ ಹೋದ ಬಳಿಕವೂ ಈಗಿನ ವೈದ್ಯರು ಕಣ್ಣು ಮುಂತಾದ ಇಂದ್ರಿಯಗಳನ್ನು ತೆಗೆದು ಕಣ್ಣಿಲ್ಲದವರಿಗೆ ನೀಡುತ್ತಾರೆ. ಪ್ರಾಣದೇವರು ಹೋದ ಬಳಿಕ ಇಂದ್ರಿಯಗಳು ಇಲ್ಲವಾದಲ್ಲಿ, ಅವು ಮತ್ತೊಬ್ಬ ವ್ಯಕ್ತಿಯಲ್ಲಿ (ಕಣ್ಣನ್ನು ಪಡೆದ ವ್ಯಕ್ತಿಯಲ್ಲಿ) ಹೇಗೆ ಕಾರ್ಯ ನಿರ್ವಹಿಸಲು ಸಾಧ್ಯ ಎನ್ನುವದು ಪ್ರಶ್ನೆ.

ಇದಕ್ಕೆ ಉತ್ತರ ಹೀಗಿದೆ —

ನೋಡಿ, ಉಪನಿಷತ್ತು ಹೇಳುತ್ತಿರುವ ಕಥೆ ಪ್ರಾಣತತ್ವ ದೇಹವನ್ನು ಬಿಟ್ಟ ಬಳಿಕ ಯಾವುದೇ ದೇವತೆ ಆ ದೇಹದಲ್ಲಿದ್ದರೂ ಆ ದೇವತೆಗೆ ತನ್ನ ಅಧೀನವಾದ ಇಂದ್ರಿಯವನ್ನು ಪ್ರೇರಿಸಲು ಸಾಧ್ಯವಿಲ್ಲ. ಅಂದರೆ, ಕಣ್ಣನ್ನು ನಿಯಮಿಸುವ ದೇವತೆ ಸೂರ್ಯ. ಮುಖ್ಯಪ್ರಾಣ ದೇಹ ಬಿಟ್ಟ ಬಳಿಕ ಸೂರ್ಯ ಬಂದು ಕಣ್ಣಿನಲ್ಲಿ ಕುಳಿತರೂ ಆ ಕಣ್ಣಿನಿಂದ ನಾವು ನೋಡಲು ಸಾಧ್ಯವಿಲ್ಲ ಎನ್ನುವದು ಉಪನಿಷತ್ತು ತಿಳಿಸಿದ್ದು. ಈಗ ಸತ್ತ ದೇಹದಲ್ಲಿಯೂ ಆ ರೀತಿಯಾಗಿ ನಡೆಯುವದಿಲ್ಲ. ಪ್ರಾಣ ಹೋದ ಬಳಿಕ ಆ ದೇಹದಲ್ಲಿ ಯಾವ ಚೈತನ್ಯದ ಕ್ರಿಯೆಗಳೂ ನಡೆಯುವದಿಲ್ಲ. ಸತ್ತ ವ್ಯಕ್ತಿ ಯಾರನ್ನೂ ನೋಡಲು ಸಾಧ್ಯವಾಗುವದಿಲ್ಲ, ಮಾತನಾಡಲು ಸಾಧ್ಯವಿಲ್ಲ.

ಆದರೆ, ಸತ್ತ ದೇಹದ ವ್ಯಕ್ತಿಯ ಅಂಗವನ್ನು ತೆಗೆದು ಮತ್ತೊಬ್ಬ ವ್ಯಕ್ತಿಯ ದೇಹಕ್ಕೆ ಸೇರಿಸಿದಾಗ ಅದು ಕಾರ್ಯಶೀಲವಾಗುತ್ತದೆ. ಇದು ಹೇಗೆ ಸಾಧ್ಯ? ವಿಜ್ಞಾನದಿಂದ ಸಾಬೀತಾಗಿರುವ ಈ ವಿಷಯ

ಉಪನಿಷತ್ತಿನ ತತ್ವಕ್ಕೆ ವಿರೋಧಿಯಾಗಲಿಲ್ಲವೇ ಎಂದು.

ಸತ್ತ ವ್ಯಕ್ತಿಯ ಕಣ್ಣನ್ನು ಪಡೆಯುತ್ತಿರುವ ಕುರುಡನಲ್ಲಿ ಇಂದ್ರಿಯ ಇದ್ದೇ ಇದೆ. ಗೋಳಕ ದೋಷಪೂರ್ಣವಾಗಿದೆ. ದೋಷಪೂರ್ಣವಾದ ಗೋಳಕವನ್ನು ತೆಗೆದು ಕಾರ್ಯ ನಿರ್ವಹಿಸುತ್ತಿರುವ ಗೋಳಕವನ್ನು ಹಾಕಿದಾಗ ಕುರುಡನಿಗೆ ಕಣ್ಣು ಕಾಣಿಸುತ್ತದೆ. ಹೀಗಾಗಿ ವೈದ್ಯರು ಬದಲಿಸುತ್ತಿರುವದು ದೇಹದ ಒಂದು ಭಾಗವನ್ನಷ್ಟೇ ಹೊರತು, ಇಡಿಯ ಕಣ್ಣನ್ನಲ್ಲ. (ಕಣ್ಣು ಬದಲಾಯಿಸುವದು ಎಂದರೆ ಇಡಿಯ ಕಣ್ಣನ್ನು ತೆಗೆದು ಮತ್ತೊಂದು ಕಣ್ಣನ್ನಿಡುವದಲ್ಲ. ಕಣ್ಣಿನಲ್ಲಿ Cornea ಎಂಬ ಒಂದು ಭಾಗವಿದೆ. ಕಣ್ಣುಗುಡ್ಡೆಯ ಮುಂಭಾಗದಲ್ಲಿರುವ ಪಾರದರ್ಶಕವಾದ ಪಟಲ. ಇದರಲ್ಲಿ ರಕ್ತನಾಳಗಳಿರುವದಿಲ್ಲ. ಕಣ್ಣಿನಲ್ಲಿನ ತೇವಾಂಶದಿಂದಲೇ ಇದು ಶಕ್ತಿಯನ್ನು ಪಡೆಯುತ್ತದೆ. ಆ ಕಾರ್ನಿಯಾವನ್ನು ಮಾತ್ರ ಸತ್ತ ವ್ಯಕ್ತಿಯ ದೇಹದಿಂದ ಪಡೆದು ಕುರುಡರಿಗೆ ಹಾಕುತ್ತಾರೆ. ಆಗ ಅವರ ಕಣ್ಣು ಸರಿಯಾಗಿ ಕಾಣುತ್ತದೆ.)

ಇದು ಕೆಟ್ಟುಹೋದ ಬಲ್ಬನ್ನು ತೆಗೆದು ಹೊಸ ಬಲ್ಬನ್ನು ಹಾಕಿದ ಹಾಗೆ.

ವಿದ್ಯುತ್ — ಶಕ್ತಿ — ಇದ್ದೇ ಇದೆ. ಆದರೆ ಅದರ ಗೋಳಕ — ಬಲ್ಬು — ಕೆಟ್ಟು ಹೋದ ಕಾರಣಕ್ಕೆ ಬೆಳಕು ಬರುತ್ತಿಲ್ಲ. ನಾವು ಕೆಟ್ಟ ಬಲ್ಬನ್ನು ಸರಿಪಡಿಸಿದೆವು, ಅಥವಾ ಹೊಸತನ್ನು ತಂದು ಬದಲಾಯಿಸಿದೆವು, ಕಾರ್ಯ ನಿರ್ವಹಣೆಯಾಯಿತು.

ಹಾಗೆ, ಇಂದ್ರಿಯ — ಶಕ್ತಿ — ಇದ್ದೇ ಇದೆ. ಆದರೆ ಅದರ ಗೋಳಕ — ಕಾರ್ನಿಯಾ — ಕೆಟ್ಟು ಹೋಗಿದೆ. ಹೊಸದಾದ ಕಾರ್ನಿಯಾ ದೊರೆಯಲು ಸಾಧ್ಯವಿಲ್ಲವಾದ್ದರಿಂದ ಸತ್ತ ವ್ಯಕ್ತಿಯ ಕಣ್ಣಿನಿಂದ ಕಾರ್ನಿಯಾವನ್ನು ತೆಗೆದು ಈ ಕಣ್ಣಿನಲ್ಲಿಟ್ಟರೆ ಕಣ್ಣು ನೋಡಲು ಆರಂಭಿಸುತ್ತದೆ.

(ಇನ್ನೂ ತಮಾಷೆಯಾಗಿ ಹೇಳಬೇಕೆಂದರೆ, 80, 90 ರ ದಶಕದಲ್ಲಿ ಫಿಲಮೆಂಟ್ ಬಲ್ಬುಗಳನ್ನು ಉಪಯೋಗಿಸುವಾಗ ಅದರಲ್ಲಿನ ಪಿಲಮೆಂಟ್ ತುಂಡಾಗಿದ್ದರೆ ಜೋಪಾನವಾಗಿ ಜೋಡಿಸಿ, ಮತ್ತೆ

ಲೈಟು ಉರಿಯುವ ಹಾಗೆ ಮಾಡಿ ದುಡ್ಡು ಉಳಿಸಿದೆವು ಎಂದು ಸಂತೋಷಿಸುತ್ತಿದ್ದೆವಲ್ಲ ಹಾಗೆ, ವೈದ್ಯರು ಇಡಿಯ ಕಣ್ಣನ್ನು ಬದಲಾಯಿಸದೇ ಅದರಲ್ಲಿನ ಕಾರ್ನಿಯಾವನ್ನು ಮಾತ್ರ ಬದಲಾಯಿಸಿ ಕುರುಡರಿಗೆ ಬೆಳಕಿನ ಬದುಕು ನೀಡಿಬಿಡುತ್ತಾರೆ)

ಈ ಕಾರ್ನಿಯಾ ಎನ್ನುವದು ಗೋಳಕದ ಒಂದು ಭಾಗ. ಕಣ್ಣು ಗುಡ್ಡೆಯಲ್ಲಿ ಲೆನ್ಸ್, ರೆಟಿನಾ, ಪ್ಯೂಪಿಲ್, ಐರಿಸ್, ಮ್ಯಾಕುಲಾ ಎಂಬ ಹಲವಾರು ಭಾಗಗಳು ಸೇರಿ ಕಣ್ಣುಗುಡ್ಡೆ ಎಂಬ ಗೋಳಕ ನಿರ್ಮಾಣವಾಗುತ್ತದೆ. ಅದರಲ್ಲಿನ ಕಾರ್ನಿಯಾ ಎಂಬ ಭಾಗವನ್ನು ಮಾತ್ರ ಸತ್ತ ವ್ಯಕ್ತಿಯ ದೇಹದಿಂದ ತೆಗೆದು ಜೋಡಿಸುತ್ತಾರೆ. ಇಂದ್ರಿಯವನ್ನಲ್ಲ.

ಇಂದ್ರಿಯ ಮನುಷ್ಯದೃಷ್ಟಿಗೆ ಅಗೋಚರವಾದದ್ದು, ಅದು ಶಕ್ತಿರೂಪವಾದದ್ದು. ಅದನ್ನು ನೋಡಲೇ ಸಾಧ್ಯವಿಲ್ಲ ಎಂದ ಬಳಿಕ ಬದಲಾಯಿಸಲು ಸಾಧ್ಯವೇ ಇಲ್ಲ. ಇಂದ್ರಿಯ ದೂರ ಉಳಿಯಿತು, ಇಡಿಯ ಕಣ್ಣು ಗುಡ್ಡೆಯನ್ನೇ ತೆಗೆದು ಮತ್ತೊಬ್ಬರಲ್ಲಿ

ಇಡಲು ಇವತ್ತಿನ ವೈದ್ಯಕೀಯಕ್ಕೂ ಸಾಧ್ಯವಿಲ್ಲ. ಏಕೆಂದರೆ ಸುಮಾರು ಹತ್ತು ಲಕ್ಷ ನರಗಳ ಸಂಯೋಜನೆ ಕಣ್ಣುಗುಡ್ಡೆಯಲ್ಲಿರುವತ್ತವೆ. ಅವನ್ನು ಒಮ್ಮೆ ಕತ್ತರಿಸಿದರೆ ಜೋಡಿಸಲು ಸಾಧ್ಯವೇ ಇಲ್ಲ.

ಕಾರ್ನಿಯಾವನ್ನು ಮಾತ್ರ ಬದಲಾಯಿಸಲು ಏಕೆ ಸಾಧ್ಯವಾಗುತ್ತದೆಯೆಂದರೆ ಕಾರ್ನಿಯಾದಲ್ಲಿ ರಕ್ತಸಂಚಾರವಿರುವದಿಲ್ಲ, ರಕ್ತನಾಳಗಳಿರುವದಿಲ್ಲ. ಕಣ್ಣಿನಲ್ಲಿನ ತೇವಾಂಶದಿಂದ ಅದು ಶಕ್ತಿಯನ್ನು ಪಡೆಯುತ್ತಿರುತ್ತದೆ. ಹೀಗಾಗಿ ವೈದ್ಯಕೀಯಕ್ಕೆ ಅದನ್ನು ಬದಲಾಯಿಸಲು ಸಾಧ್ಯವಾಗಿದೆ.

ಇದರಿಂದ ಅರ್ಥವಾಗುವ ವಿಷಯವೇನೆಂದರೆ ಗೋಳಕ ಕಾರ್ಯ ನಿರ್ವಹಿಸುತ್ತಿದೆ. ಅದರ ಭೌತಿಕ ಗುಣಗಳು ವಿನಾಶವಾಗುವವರೆಗೆ (ಕೆಲವು ಅಂಗಗಳಿಗೆ ನೂರುಗಂಟೆಯ ವರೆಗೆ ನಾಶವಾದದೇ ಇರುವ ಶಕ್ತಿಯಿರುತ್ತದೆ) ಅವನ್ನು ಬದಲಾಯಿಸಬಹುದು. ಸತ್ತ ವ್ಯಕ್ತಿಯ ದೇಹದಿಂದ ಜೀವವನ್ನು ನಿಯಮಿಸುವ ದೇವತೆಗಳು ಮತ್ತು ಇಂದ್ರಿಯಗಳನ್ನು ನಿಯಮಿಸುವ ದೇವತೆಗಳು ಹೊರಟು ಹೋಗಿದ್ದಾರೆ. ಅಲ್ಲಿ ಇಂದ್ರಿಯಗಳ

ಕಾರ್ಯವಿಲ್ಲ. ಕುರುಡನಿಗೆ ನೋಡುವ 'ಶಕ್ತಿ' ಇದೆ, ಅಂದರೆ ಚಕ್ಷುರಿಂದ್ರಿಯ ಇದೆ. ಆದರೆ ನೋಡಲಿಕ್ಕೆ ಸಾಧನವಾದ ಗೋಳಕದಲ್ಲಿ ಸಮಸ್ಯೆಯಿದೆ. ವಿದ್ಯುತ್ತಿದೆ, ಬಲ್ಬು ಕೆಟ್ಟು ಹೋದ ಹಾಗೆ. ಉಪಕರಣವನ್ನು ಬದಲಾಯಿಸಿದಾಗ ಕಾರ್ಯ ನಿರ್ವಾಹವಾಗುವಂತೆ ಗೋಳಕವನ್ನು ಬದಲಾಯಿಸಿದಾಗ ಕುರುಡನಿಗೆ ಎಲ್ಲವೂ ಕಾಣಲಾರಂಭಿಸುತ್ತದೆ.

ಹೀಗಾಗಿ ಇಲ್ಲಿ ಇಂದ್ರಿಯದ ಬದಲಾವಣೆಯಲ್ಲ, ಗೋಳಕದ — ದೇಹದ ಒಂದು ಭಾಗದ — ಬದಲಾವಣೆಯಾಗುತ್ತಿದೆ, ಆದ್ದರಿಂದ ಉಪನಿಷತ್ತು ತಿಳಿಸುವ ತತ್ವಕ್ಕೂ, ವಿಜ್ಞಾನದ ತತ್ವಕ್ಕೂ ವಿರೋಧವೇ ಇಲ್ಲ.

ಇಷ್ಟು ತಿಳಿದ ಬಳಿಕ ಮತ್ತೊಂದು ಪ್ರಶ್ನೆ ಮೂಡಬಹುದು. ಸತ್ತ ವ್ಯಕ್ತಿಯಲ್ಲಿನ ಯಾವುದೇ ಅಂಗ ಮತ್ತೆ ಹೇಗೆ ಕಾರ್ಯ ನಿರ್ವಹಿಸಲು ಸಾಧ್ಯ? ಇದನ್ನು ಶಾಸ್ತ್ರೀಯವಾಗಿ ಹೇಗೆ ಒಪ್ಪುವದು.

ನೋಡಿ, ಕೆಲವು ಬಾರಿ ಸತ್ತವರು ಮತ್ತೆ ಬದುಕಿ ಬರುತ್ತಾರೆ. ಒಂದೆರಡು ಗಂಟೆಗಳ ಕಾಲ ದೇಹದಲ್ಲಿ ಪ್ರಾಣವೇ ಇರುವದಿಲ್ಲ. ಆದರೆ, ಮತ್ತೆ ಬದುಕುತ್ತಾರೆ. ಈ ತರಹದ ಹತ್ತಾರು ಘಟನೆಗಳನ್ನು ಕೇಳಿರುತ್ತೇವೆ. ಇದರರ್ಥ, ಸತ್ತ ವ್ಯಕ್ತಿಯಲ್ಲಿ ಮತ್ತೆ ಜೀವದ ಪ್ರವೇಶವಾದರೆ ಅದು ಕ್ರಿಯಾಶೀಲವಾಗಲು ಸಾಧ್ಯ. ಆ ದೇಹದ ಭೌತಿಕ ಗುಣಗಳು ಹಾಗೇ ಇವೆ. ಸತ್ತ ನಂತರ ವಿಕಾರ ಸಹಿತ ಉಂಟಾಗುತ್ತದೆ. ಒಂದು ಕಲ್ಲು ಸಾವಿರಾರು ವರ್ಷವಿದ್ದರೂ ಕೊಳೆಯುವದಿಲ್ಲ. ಆದರೆ ದೇಹದಿಂದ ಪ್ರಾಣ ಹೊರ ಹೋಗುತ್ತಿದ್ದಂತೆ ಕೊಳೆಯಲು ಆರಂಭಿಸುತ್ತದೆ. ಅಂದರೆ ಅದರಲ್ಲಿ ವಿಕಾರವಾಗುತ್ತಿದೆ. ವಿಕಾರವಾಗುವ ಗುಣ ಇನ್ನೂ ಇದೆ ಎಂದರ್ಥ.

ಇನ್ನೂ ಸುಲಭವಾಗಿ ಹೇಳಬೇಕೆಂದರೆ, ನಾವು ಕುರ್ಚಿಯಲ್ಲಿ ಕೂಡುತ್ತೇವೆ. ಹೆಣವನ್ನು ತೆಗೆದು ಕುರ್ಚಿಯಲ್ಲಿ ಕೂಡಿಸಿದರೆ ಅದೂ ಕೂತಿರುತ್ತದೆ. ಅಂದರೆ ಕುಳಿತುಕೊಳ್ಳುವ ಗುಣ ಇನ್ನೂ ಅದರಲ್ಲಿದೆ. ಸಾಯುವದರಿಂದ ಹೋಗಿಲ್ಲ.  ಹೇಗೆ ಆ ಹೆಣಕ್ಕೆ ಸ್ವಯಂ ಕೂಡಲು ಸಾಧ್ಯವಿಲ್ಲ,

ಮತ್ತೊಬ್ಬರು ಕೂಡಿಸಬೇಕೋ, ಹಾಗೆ ಅದರಲ್ಲಿನ ಕೆಲವು ಅಂಗಗಳು ಇನ್ನೂ ಕಾರ್ಯವನ್ನು ಮಾಡಬಲ್ಲವು. ನುರಿತ ವೈದ್ಯರು ಕಾರ್ನಿಯಾವನ್ನು ತೆಗೆದು ಕುರುಡರಲ್ಲಿಟ್ಟರೆ ಕುರುಡರಲ್ಲಿರುವ ಚಕ್ಷುರಿಂದ್ರಿಯ ಈ ಗೋಳಕದ ಮುಖಾಂತರ ಕಾರ್ಯವನ್ನು ಮಾಡಲು ಆರಂಭಿಸುತ್ತದೆ.

ಹೀಗಾಗಿ, ಇಂದ್ರಿಯಗಳ — ಶಕ್ತಿಯ — ಬದಲಾವಣೆ ನಡೆದಿಲ್ಲ. ಗೋಳಕಗಳ — ಉಪಕರಣದ — ಬದಲಾವಣೆ ನಡೆಯುತ್ತಿದೆಯಾದ್ದರಿಂದ ಯಾವ ಸಮಸ್ಯೆಯೂ ಇಲ್ಲ. [2]

---

[2] "ಹಾಗಾದರೆ, ನಾವು ಸತ್ತ ಬಳಿಕ ನಮ್ಮ ದೇಹದ ಇಂದ್ರಿಯಗಳನ್ನು ದಾನ ನೀಡುವದು ಶಾಸ್ತ್ರಸಮ್ಮತವೇ, ಇಂದ್ರಿಯವನ್ನು ನೀಡುತ್ತಿಲ್ಲವಾದ್ದರಿಂದ ಸತ್ತಮೇಲೆ ಕಣ್ಣುದಾನ ಮಾಡಿದರೆ ಮುಂದೆ ಕುರುಡರಾಗಿ ಹುಟ್ಟುತ್ತಾರೆ ಎನ್ನುವವರ ಮಾತಿಗೆ ಬೆಲೆಯಿಲ್ಲದಂತಾಯಿತೀಗ" ಎನ್ನುವ ಪ್ರಶ್ನೆಯನ್ನು ಬೇರೆ ಸಂದರ್ಭದಲ್ಲಿ ಚರ್ಚಿಸುತ್ತೇನೆ. "ಲೌಕಿಕ ಜೀವನದಲ್ಲಿ ಶಾಸ್ತ್ರೀಯ ಸಮಸ್ಯೆಗಳು" ಎಂಬ ವಿಷಯದಡಿಯಲ್ಲಿ ಬರುವ ಪ್ರಶ್ನೆಯಿದು. ಆಗ ಉತ್ತರಿಸುತ್ತೇನೆ.

ಈಗಲೇ ಉತ್ತರಿಸದಿರಲು ಮತ್ತೊಂದು ಕಾರಣ, ನಮ್ಮ ಸಮಾಜ Fanatics ಗಳಿಂದ ತುಂಬಿ ಹೋಗಿದೆ. ಮೇಲಿನ ಪ್ರಶ್ನೋತ್ತರ ಆ ಅಂಧಾಭಿಮಾನಿಗಳಿಗೆ ಆಹಾರ. ವಿಮರ್ಶೆಗೂ ನಿಂದೆಗೂ ವ್ಯತ್ಯಾಸ ತಿಳಿಯದ ಮಂದಿಯೊಂದಿಗೆ ಹೋರುವ ಶಕ್ತಿ ಸದ್ಯಕ್ಕೆ ನನಗಿಲ್ಲ.

ದೇಹದಿಂದ ಜೀವ ಹೊರ ಹೋಗಬೇಕಾದರೆ ಇಂದ್ರಿಯಗಳು — ಶಕ್ತಿಗಳು — ಅವನೊಟ್ಟಿಗೇ ಹೋಗುತ್ತವೆ. ಆ ಜೀವ ಮತ್ತೊಂದು ದೇಹವನ್ನು ಪಡೆದಾಗ ಅವನ ಇಂದ್ರಿಯಗಳು ಆ ದೇಹದಲ್ಲಿನ ಗೋಳಕಗಳ ಮುಖಾಂತರ ಕಾರ್ಯವನ್ನು ನಿರ್ವಹಿಸುತ್ತವೆ.

ಇನ್ನೂ ಸಂಶಯ ಉಳಿದಿದ್ದರೆ ಪ್ರಶ್ನೆಯನ್ನು ಕೇಳಿ. ಉತ್ತರಿಸಲು ಪ್ರಯತ್ನಿಸುತ್ತೇನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ



# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಿಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491